KATK010040132021

<u>**ಒಂದನೇ** ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ, ತುಮಕೂರು.</u>

<u>**ಎಸ್.ಸಿ. ನಂ. 106/2021**</u>

<u>ಫಿರ್ಯಾದುದಾರಃ</u> ರಾಜ್ಯ ಸರ್ಕಾರದ ಪರವಾಗಿ
ಹೆಬ್ಬೂರು ಪೊಲೀಸ್ ಠಾಣೆ

ವಿರುದ್ಧ

<u>ಆರೋಪಿತ</u> ರವಿ @ ರವಿಕುಮಾರ್,
ಬಿನ್ ಲೇಟ್ ಬಸವರಾಜು, 29 ವರ್ಷ,
ಗರುಡಪ್ಪ ಮನೆಯ ಹಿಂಭಾಗ, ಎ.ಕೆ.ಕಾವಲ್,
ಹೊನ್ನುಡಿಕೆ ಹ್ಯಾಂಡ್ ಪೋಸ್ಟ್ ,
ಗೂಳೂರು ಹೋಬಳಿ, ತುಮಕೂರು ತಾಲ್ಲೂಕು.

<u>**ದೋಷಾರೋಪಣೆ**</u>

ಡಿ.ಟಿ. ಪುಟ್ಟರಂಗಸ್ವಾಮಿ, 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸುತ್ತಿದ್ದೇನೆ,

ಆರೋಪಿಯಾದ ನೀವು ದಿನಾಂಕಃ 15-04-2021 ರಂದು ಹೊನ್ನುಡಿಕೆ ಹ್ಯಾಂಡ್ ಪೋಸ್ಟ ನಲ್ಲಿರುವ ಶ್ರೀ ರಂಗ ಬಾರ್ ನಲ್ಲಿ ವರದರಾಜ ಇವರು ಬಿಯರ್ ಬಾಟಲ್ ನಲ್ಲಿ ನಿಮಗೆ ಹೊಡೆದ ಬಗ್ಗೆ ನೀವು ಅದರ ಬಗ್ಗೆ ಮನಸ್ಸಿನಲ್ಲಿ ದ್ವೇಷ ಇಟ್ಟುಕೊಂಡು, ದಿನಾಂಕಃ 22-05-2021 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ವರದರಾಜು ರವರ ಮನೆಯ ಬಳಿ ಹೋಗಿ ಸಾಕ್ಷಿ-1 ರವರಿಗೆ ಹೊರಗಡೆ ಸ್ವಲ್ಪ ಕೆಲಸ ಇದೆ ಎಂದು ವರದರಾಜನನ್ನು ಕರೆದುಕೊಂಡು ಹೋಗುವುದಾಗಿ ತಿಳಿಸಿ, ಆತನನ್ನು ಹೊನ್ನುಡಿಕೆ

ಹ್ಯಾಂಡ್ ಪೋಸ್ಟ್ , ರಸ್ತೆಯಲ್ಲಿರುವ ಶ್ರೀ ಆಂಜನೇಯಸ್ವಾಮಿ ಪಾರ್ಕ್ ಗೆ ಕರೆದುಕೊಂಡು ಬಂದು ಬೆಳಿಗ್ಗೆ 8.40 ರ ಸಮಯದಲ್ಲಿ ಟೈಲ್ಸ್ ಕೆಲಸ ಮಾಡಲು ಇಟ್ಟುಕೊಂಡಿದ ಕಬ್ಬಿಣದ ರಾಡ್ ನಿಂದ ವರದರಾಜುರವರ ತಲೆಗೆ 3-4 ಬಾರಿ ಹೊಡೆದಿರುತ್ತೀರಿ. ವರದರಾಜು ರವರನ್ನು ಸಾಕ್ಷಿ 2, 3, 4, 5 ರವರು ಗಳು ಆಂಬುಲೆನ್ಸ್ ನಲ್ಲಿ ತುಮಕೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಅಲ್ಲಿಂದ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುತ್ತಿದ್ದಾಗ ಆತನು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾನೆ. ಆತನನ್ನು ಕೊಲೆ ಮಾಡಿರುವುದರಿಂದ ನೀವು ಭಾ.ದಂ.ಸಂ.ಕಲಂ 302 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಆರೋಪಿತರಾದ ನಿಮಗೆ ಈ ಮೇಲಿನ ಆಪಾದನೆಯನ್ನು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ 30 ನೇ ಜನವರಿ 2023.

( ಡಿ.ಟಿ. ಪುಟ್ಟರಂಗಸ್ವಾಮಿ )
1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.